KARC200016762023

Presented on : 17-08-2023
Registered on : 17-08-2023
Decided on : 04-06-2026
Duration: 02 yrs, 09 months, 18 days

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವದುರ್ಗ ನ್ಯಾಯಾಲಯ, ದೇವದುರ್ಗ.

ಉಪಸ್ಥಿತರು : ಶ್ರೀ.ಸುರೇಶ ಅಣ್ಣಪ್ಪ ಸವದಿ.

ಬಿ.ಎ,ಎಲ್.ಎಲ್.ಬಿ.,(ಸ್ಪೇಷಲ್).

ಇಂದು ದಿನಾಂಕ 4 ನೇ ಜೂನ್ 2026

ಸಿ. ಸಿ. ನಂ.576 : 2023

(ಗುನ್ನೆ ನಂ.44/2023– ಗಬ್ಬೂರು ಪೋಲಿಸ್ ಠಾಣೆ)

| | |
|---|---|
| **ಪಿರ್ಯಾದುದಾರರು :** | ಕರ್ನಾಟಕ ಸರಕಾರ, ಗಬ್ಬೂರು ಪೋಲಿಸ್ ಠಾಣೆ, ಗಬ್ಬೂರು. |
| | (ಸಹಾಯಕ ಸರಕಾರಿ ಅಭಿಯೋಜಕರು) |
| **ಆರೋಪಿತರು:** | 1. ಬುಸಣ್ಣ ತಂದೆ ಕರಿಬಸಪ್ಪ,<br>ವಯಸ್ಸುಃ 55 ವರ್ಷ, ಉಃ ವೆಂಡರ್,<br>ಸಾಃ ಖಾನಾಪೂರ, ತಾಃ ದೇವದುರ್ಗ. |
| | ( ಶ್ರೀ.ಬಿ.ಕೆ. ವಕೀಲರು) |

| | |
|---|---|
| ಗುನ್ನೆ ನಡೆದ ದಿನಾಂಕ | 17.04.2023 |
| ಗುನ್ನೆಯನ್ನು ವರದಿ ಮಾಡಿದ ದಿನಾಂಕ | 17.04.2023 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | 17.08.2023 |
| ದೋಷಾರೋಪಣೆ ಮಾಡಿದ ದಿನಾಂಕ | 03.02.2024 |

| | |
|---|---|
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 25.07.2025 |
| ತೀರ್ಪನ್ನು ಕಾಯ್ದಿರಿಸಿದ ದಿನಾಂಕ | 25.05.2026 |
| ತೀರ್ಪಿನ ದಿನಾಂಕ | 04.06.2026 |
| ಶಿಕ್ಷೆಯ ಆದೇಶದ ದಿನಾಂಕ, ಯಾವುದಾದರೂ ಇದ್ದರೆ | – |

## ತೀರ್ಪು

ಪ್ರಸ್ತುತ ಮೊಕದ್ದಮೆಯನ್ನು ಆರಕ್ಷಕ ಉಪನೀರಿಕ್ಷಕರು, ಗಬ್ಬೂರು ಪೋಲಿಸ ಠಾಣೆ, ಗಬ್ಬೂರು ಇವರು ಆರೋಪಿತರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರನ್ವಯ ಶಿಕ್ಷಾರ್ಹ ಅಪರಾಧಗಳಿಗಾಗಿ ಸಲ್ಲಿಸಿದಂತಹ ದೋಷಾರೋಪಣಾ ಪತ್ರದ ಆಧಾರದ ಮೇರೆಗೆ ನೊಂದಾಯಿಸಿಕೊಳ್ಳಲಾಗಿದೆ.

2. **ಅಭಿಯೋಗ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಾಣಿಸಿದಂತಿದೆಃ**

ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ಖಾನಾಪೂರ ಗ್ರಾಮದಲ್ಲಿ ಆರೋಪಿತನು ತನ್ನ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ದಿನಾಂಕ 17.04.2023 ಸಂಜೆ 05.45 ಗಂಟೆ ಸುಮಾರಿಗೆ ಯಾವುದೇ ಲೈಸನ್ಸ್ ಇಲ್ಲದೆ ಅಕ್ರಮವಾಗಿ 90 ಎಮ್.ಎಲ್.ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 50 ಪೌಚ್‌ಗಳನ್ನು ಮಾರಾಟ ಮಾಡಿರುತ್ತಾರೆ ಎಂಬ ಪ್ರಕರಣ ದಾಖಲಾಗಿರುತ್ತದೆ. ಆದಕಾರಣ ಆರೋಪಿತನ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿ ಅಪರಾಧವೆಸಗಿರುತ್ತಾರೆ.

3. ಘಟನೆಯ ಕುರಿತು ಆರಕ್ಷಕ ಉಪನೀರಿಕ್ಷಕರು, ಗಬ್ಬೂರು, ತಾವು ಅಮಾನತ್ತು ಪಡಿಸಿಕೊಂಡಿರುವ ಮದ್ಯ, ದೂರು ಮತ್ತು ಪಂಚನಾಮೆ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆಯನ್ನು ಕೈಗೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿತನ

ವಿರುದ್ಧ ಸಾಕಷ್ಟು ಸಾಕ್ಷಿ ಪುರಾವೆಗಳು ದೊರೆತಿದ್ದ ಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

4. ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಮೇಲ್ಕಾಣಿಸಿದ ಅಪರಾಧಗಳಿಗೆ ಸೌಂಜ್ಞೆಯತೆನ್ನು ತೆಗೆದುಕೊಂಡು ಆರೋಪಿತನ ಹಾಜರಾತಿಯನ್ನು ಪಡೆದಿದ್ದು ಆರೋಪಿತನು ತನ್ನ ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಗುಜರಾಯಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತನಿಗೆ ಅಭಿಯೋಗ ಪರ ದಾಖಲಾತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರನ್ವಯ ಒದಗಿಸಲಾಗಿದೆ. ನಂತರ ಆರೋಪಿತನಿಗೆ ಮೇಲ್ಕಾಣಿಸಿದ ಕಲಂ ರನ್ವಯ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಆರೋಪಿತನು ತಾನು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಉತ್ತರಿಸಿ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

5. ಆರೋಪಿತನು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾಧಗಳನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು ಒಟ್ಟು ಐದು ಸಾಕ್ಷಿದಾರರನ್ನು ಫ್ರಾಸಾಃ1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿಕೊಂಡು ಹಾಗೂ ಒಟ್ಟು ನಾಲ್ಕು ದಾಖಲೆಯನ್ನು ನಿಶಾನೆ ನಿಪಿ-1 ರಿಂದ 4 ಹಾಗೂ ಮುದ್ದೆಮಾಲು-1 ಎಂದು ಗುರುತಿಸಿಕೊಂಡಿದೆ. ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ನಂತರ ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.313 ರನ್ವಯ ವಿಚಾರಣೆಗೊಳಪಡಿಸಿದ್ದು, ಆರೋಪಿತನು ತನ್ನ ವಿಚಾರಣಾ ಸಮಯದಲ್ಲಿ ಅಭಿಯೋಗ ಪರ ಸಾಕ್ಷಿದಾರರು ನುಡಿದಿರುವಂತಹ ಸಾಕ್ಷ್ಯವನ್ನು ಅಲ್ಲಗಳೆದು, ತಮ್ಮ ಪರ ಯಾವುದೇ ಪ್ರತಿರಕ್ಷೆ ಸಾಕ್ಷ್ಯವಿಲ್ಲವೆಂದು ನುಡಿದಿರುತ್ತಾರೆ ಮತ್ತು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

6. ಅಭಿಯೋಗ ಪರ ಮತ್ತು ಆರೋಪಿತನ ಪರ ವಕೀಲರ ವಾದ-ಪ್ರತಿವಾದವನ್ನು ಆಲಿಸಿ ಕಡತಗಳನ್ನು ಪರಿಶೀಲನೆ ಮಾಡಲಾಯಿತು.

7. ಆರೋಪಿತನ ಮೇಲಿನ ಆರೋಪಣೆಯನ್ನು ನಿಸ್ಸಂದೇಹವಾಗಿ ರುಜುವಾತುಪಡಿಸುವುದು, ಅಭಿಯೋಗ ಮೊಕದ್ದಮೆ ಆದ್ಯ ಕರ್ತವ್ಯ. ಕಾರಣ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುತ್ತವೆಃ

1) ಅಭಿಯೋಜನೆಯು ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ಖಾನಾಪೂರ ಗ್ರಾಮದಲ್ಲಿ ಆರೋಪಿತನು ತನ್ನ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ದಿನಾಂಕ 17.04.2023 ಸಂಜೆ 05.45 ಗಂಟೆ ಸುಮಾರಿಗೆ ಯಾವುದೇ ಲೈಸನ್ಸ್ ಇಲ್ಲದೆ ಅಕ್ರಮವಾಗಿ 90 ಎಮ್.ಎಲ್.ನ ಓರಿಜಿನ ಚಾಯ್ಸ್ ಡಿಲಕ್ಸ್ ವಿಸ್ಕಿ 50 ಪೌಚ್‌ಗಳನ್ನು ಮಾರಾಟ ಮಾಡಿ ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆಂದು ಅಭಿಯೋಗದವರು ಸಂಶಾಯಾತೀತವಾಗಿ ರುಜುವಾತು ಪಡಿಸಿರುತ್ತಾರೆಯೇ?

2) ಯಾವ ಆದೇಶ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| ಅಂಶ.1 | ಃ | ನಕರಾತ್ಮಕವಾಗಿ, |
| ಅಂಶ.2 | ಃ | ಅಂತಿಮ ಆದೇಶದಂತೆ ಈ ಕೆಳಗಿನ |

## ಃಃ ಕಾರಣಗಳು ಃಃ

9. **ಅಂಶ.1ಃ–** 11. ಚಾಸಾ–5/ ಪ್ರಾಸಾ–1/ ಶಂಕರ ತಂದೆ ಬಸವರಾಜ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 17.04.2023 ರಂದು ಸಂಜೆ 05.15 ಗಂಟೆಗೆ ನಾನು ಚಾಸಾ–4 ಮತ್ತು 6 ಠಾಣೆಯಲ್ಲಿ ಇದ್ದಾಗ ಪಿಎಸ್‌ಐ ಇವರು ನಮ್ಮನ್ನು ಕರೆಸಿ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಬಾತ್ಮಿ ಮೇರೆಗೆ ತಿಳಿಸಿದ್ದು ತಕ್ಷಣ ಚಾಸಾ–2 ಮತ್ತು 3

ರವರನ್ನು ಬರಮಾಡಿಕೊಂಡು ಸರಕಾರಿ ವಾಹನದಲ್ಲಿ ಹೋಗಿ ಗುಡಿಯ ಹಿಂದೆ ಜೀಪನ್ನು ಮರೆಯಲ್ಲಿ ನಿಲ್ಲಿಸಿ ನೋಡಲಾಗಿ ಒರ್ವ ವ್ಯಕ್ತಿ ಗುಡಿ ಮುಂದೆ ತನ್ನ ಕಿರಾಣಿ ಮುಂದೆ ಅಕ್ರಮ ಮಧ್ಯದ ಬಾಟಲಿಗಳನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಜನ ಸುತ್ತುವರೆದು ನಿಂತು ಮಧ್ಯವನ್ನು ಖರೀದಿ ಮಾಡುತ್ತಿದ್ದರು. ತಕ್ಷಣ ನಾವು ದಾಳಿ ಮಾಡಿದಾಗ ಜನರು ಮತ್ತು ಮಾರಾಟಗಾರನು ಓಡಿ ಹೋಗಿದ್ದು, ಓಡಿ ಹೋದ ವ್ಯಕ್ತಿ ಹೆಸರು ವಿಚಾರಿಸಿದಾಗ ಬುಸಣ್ಣ ತಂದೆ ಕರಿಬುಸ್ಸಪ್ಪ ಎಂದು ತಿಳಿದು ಬಂದಿದ್ದು ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಓ.ಸಿ ಡಿಲಕ್ಸ್ ವಿಸ್ಕಿ 50 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಡು ಅವುಗಳಲ್ಲಿ ಇದ್ದ 01 ಪೌಚನ್ನು ರಾಸಾಯನಿಕ ಪ್ರಯೋಗಾಲಯಕ್ಕೆ ಪ್ರತ್ಯೇಕವಾಗಿ ತೆಗೆಯಲಾಗಿರುತ್ತದೆ. ನಂತರ ಜಪ್ತಿ ಪಡಿಸಿಕೊಂಡ ಅಕ್ರಮ ಮಧ್ಯವನ್ನು ಪಿಎಸ್ಐ ಇವರು ನಮ್ಮ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಆ ಕುರಿತು ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಮುದ್ದೆಮಾಲನ್ನು ಗುರುತಿಸಿಕೊಂಡು ಸಾಕ್ಷ ನುಡಿದಿರುತ್ತಾರೆ.

10. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ, ಖಾನಪೂರು ಗ್ರಾಮ ಠಾಣೆಯಿಂದ ಉತ್ತರಕ್ಕೆ ಬರುತ್ತದೆ. ಗಬ್ಬೂರು ಮತ್ತು ಖಾನಪೂರು ನಡುವೆ ಬೇರೆ ಯಾವುದೇ ಹಳ್ಳಿ ಬರುವುದಿಲ್ಲ. ಕಿರಾಣಿ ಅಂಗಡಿ ಬುಸ್ಸಪ್ಪನ ಹೆಸರಿಗೆ ಇರುತ್ತದೆ. ಅಕ್ರಮ ಮಧ್ಯ ಇಟ್ಟುಕೊಂಡಿದ್ದ ಚೀಲ ಪ್ಲಾಸ್ಟಿಕ್ ಆಗಿತ್ತು. ಓಡಿ ಹೋದವನನ್ನು ಹಿಡಿಯಲು ಪ್ರಯತ್ನ ಪಟ್ಟಾಗ ಸಿಗಲಿಲ್ಲ ಎಂಬುವುದಾಗಿ ನುಡಿದಿರುತ್ತಾರೆ.

11. ಚಾಸಾ-1/ ಪ್ರಾಸಾ-2/ ಪ್ರಕಾಶ ಸಿ ತಂದೆ ಗೋವಿಂದಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 17-04-2023 ರಂದು ಸಂಜೆ 05.15 ಗಂಟೆಗೆ ನಾನು ಠಾಣ ಪ್ರಭಾರದಲ್ಲಿ ಇದ್ದಾಗ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟದ ಬಾತ್ಮಿ ಮೇರೆಗೆ ತಕ್ಷಣ ಸಿಬ್ಬಂದಿ ಮೂಲಕ ಪಂಚರನ್ನು ಬರ ಮಾಡಿಕೊಂಡು ಸಿಬ್ಬಂದಿ ಜೊತೆ ಬಾತ್ಮಿ ಬಂದ ಸ್ಥಳಕ್ಕೆ ಹೂ್ೀಗಿ ದಾಳಿ ಮಾಡಿದಾಗ ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿ ಹೋಗಿದ್ದು ಆತನ ಬಗ್ಗೆ ವಿಚಾರಿಸಿದಾಗ ಆತನ ಹೆಸರು ಬಸ್ಸಣ್ಣ ತಂದೆ ಕರಿ ಬಸ್ಸಪ್ಪ ಎಂದು

ತಿಳಿದು ಬಂದಿರುತ್ತದೆ. ಸ್ಥಳದಲ್ಲಿ ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ ಓ.ಸಿ ಡಿಲಕ್ಸ ವಿಸ್ಕಿ 50 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಅವುಗಳಲ್ಲಿ ಒಂದು ಪೌಚನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಪಿಆರ್ ಒ ಎಂದು ಸೀಲ್ ಮಾಡಿಲಾಗಿರುತ್ತದೆ. ನಂತರ ಠಾಣೆಗೆ ಬಂದು ಜಪ್ತಿ ಮಾಡಿದ ಮುಮಾ, ದೂರು ಮತ್ತು ಪಂಚನಾಮೆ ಜೊತೆ ಚಾಸಾ-8 ರವರಿಗೆ ಪ್ರಕರಣ ದಾಖಲು ಮಾಡಲು ಹೇಳಿರುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಜ್ಞಾಪನ ಪತ್ರವನ್ನು ಗುರುತಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ.

12. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿದಾಗ, ಪಂಚರನ್ನು ವಿನೋದ ಸಿಬ್ಬಂದಿ ಕರೆದುಕೊಂಡು ಬಂದಿರುತ್ತಾರೆ. ಘಟನ ಸ್ಥಳದಲ್ಲಿ ಕಿರಾಣಿ ಅಂಗಡಿ ಇದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಆರೋಪಿಗೆ ಸೇರಿದ ಅಂಗಡಿ ಇದೆ ಎಂದರೆ ಸಾಕ್ಷಿ ಸ್ವಲ್ಪ ಅಂತರದಲ್ಲಿ ಇದೆ ಎಂದು ನುಡಿಯುತ್ತಾರೆ ಎಂಬುವುದಾಗಿ ನುಡಿದಿರುತ್ತಾರೆ.

13. ಚಾಸಾ-3/ ಪ್ರಾಸಾ-3/ ರವಿ @ ರವಿಂದ್ರ ತಂದೆ ಬಸ್ಸಪ್ಪ ಪಂಚಸಾಕ್ಷಿದಾರರು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ, ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಮದ್ಯವನ್ನು ಜಪ್ತಿ ಮಾಡಿಕೊಂಡಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯಗಳು ಗೊತ್ತಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಪಡೆದು ಪಾಟೀಸವಾಲನ್ನು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ ಅಭಿಯೋಜನೆಯು ತನ್ನ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಂಗತಿಗಳನ್ನು ಸಾಕ್ಷಿಯಿಂದ ಹೊರತರುವಲ್ಲಿ ವಿಫಲವಾಗಿರುತ್ತದೆ.

14. ಚಾಸಾ-4/ಪ್ರಾಸಾ-4/ ದೇವೇಂದ್ರ ತಂದೆ ಹನುಮಂತ್ರಾಯ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 13.04.2023 ರಂದು ಸಂಜೆ 05.15 ಗಂಟೆಗೆ ನಾನು, ಪಿಸಿ ಚುಕ್ಕಪ್ಪ,

ಪಿಸಿ ಶಂಕರ ಠಾಣೆಯಲ್ಲಿ ಇದ್ದಾಗ ಪಿಎಸ್ಐ ಇವರು ನಮ್ಮನ್ನು ಕರೆಸಿ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ತಕ್ಷಣ ದಾಳಿ ಮಾಡುವುದು ಇದೆ ಎಂದು ಹೇಳಿ ಬೂದೆಪ್ಪ ಮತ್ತು ರವಿ ಪಂಚರೊಂದಿಗೆ ಇಲಾಖ ವಾಹನದಲ್ಲಿ ಸಂಜೆ 05.30 ಗಂಟೆಗೆ ಠಾಣೆಯಿಂದ ಹೊರಟು ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹಿಂದೆ ಮರೆಯಲ್ಲಿ ವಾಹನ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಅಕ್ರಮ ಮಧ್ಯದ ಬಾಟಲಿಗಳನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಸುತ್ತಲು ಜನರು ನಿಂತು ಮಧ್ಯದ ಪೌಚುಗಳನ್ನು ಖರೀದಿಸುತ್ತಿದ್ದು ತಕ್ಷಣ ಪಂಚರೊಂದಿಗೆ 05.45 ಗಂಟೆಗೆ ದಾಳಿ ಮಾಡಿದ್ದು ಸ್ಥಳದಿಂದ ಜನರು  ಮತ್ತು ಮಧ್ಯ ಮಾರಾಟ ಮಾಡುತ್ತಿದ್ದವನು ಸಹ ಓಡಿ ಹೋಗಿದ್ದು, ಓಡಿ ಹೋದ ವ್ಯಕ್ತಿಯ ಹೆಸರು ವಿಳಾಸ ವಿಚಾರಿಸಲಾಗಿ ಆತನ ಹೆಸರು ಬೂಸಣ್ಣ ತಂದೆ ಕರಿಬಸ್ಸಪ್ಪ ಎಂದು ಗೊತ್ತಾಗಿದ್ದು ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ಒ.ಸಿ ಡಿಲಕ್ಸ ವಿಸ್ಕಿಯ 50 ಪೌಚುಗಳು ಇದ್ದು ಅವುಗಳನ್ನು ರಾಸಾಯನಿಕ ಪರೀಕ್ಷೆ ಕುರಿತು ಒಂದು ಪೌಚನ್ನು ಪ್ರತ್ಯೇಕವಾಗಿ ತೆಗೆದು ಪ್ಯಾಕ್ ಮಾಡಿ ಪಿ.ಎಸ್.ಐ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿ ಸಿರುತ್ತೇವೆ. ಪಂಚನಾಮೆಯನ್ನು ಸಂಜೆ 05.45 ರಿಂದ 06.45 ಗಂಟೆ ವರೆಗೆ ಮಾಡಿರುತ್ತೇವೆ.  ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ.

15. ಚಾಸಾ-8/ಪ್ರಾಸಾ-5/ ಬಂದಯ್ಯ ಸ್ವಾಮಿ ತಂದೆ ಬಸ್ಸಯ್ಯ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 17.04.2023 ರಂದು ಸಂಜೆ 07.15 ಗಂಟೆಗೆ ನಾನು ಠಾಣ ಪ್ರಭಾರದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಪಂಚನಾಮೆ ಮತ್ತು ಮುಮಾಗಳನ್ನು ನೀಡಿದ್ದು ಸದರಿ ಜ್ಞಾಪನ ಪತ್ರದ ಆಧಾರದ ಮೇಲೆ ಠಾಣ ಗುನ್ನ ನಂ.44/2023 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.  ಅದೇ ದಿನ

ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪಿ ನಿರೀಕ್ಷಣ ಜಾಮೀನು ಪಡೆದುಕೊಂಡು ಬಂದಿದ್ದು ಠಾಣ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 18.05.2023 ರಂದು ಮಾದರಿ ಮಧ್ಯವನ್ನು ರಾಸಾಯನಿಕ ಪರೀಕ್ಷೆ ಕುರಿತು ಕಳಿಸಿಕೊಟ್ಟಿರುತ್ತೇನೆ. ದಿನಾಂಕ 03.07.2023 ರಂದು ರಾಸಾಯನಿಕ ಪರೀಕ್ಷೆ ವರದಿ ಪಡೆದಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ಅಂತಿಮ ವರದಿ ನೀಡಿರುತ್ತೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿ ಹಾಗೂ ರಾಸಾಯನಿಕ ಪರೀಕ್ಷೆ ವರದಿಯನ್ನು ಗುರುತಿಸಿಕೊಂಡು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀಸವಾಲಿಗೆ ಒಳಪಡಿಸಿರುತ್ತಾರೆ.

16. ಕಡತದಲ್ಲಿನ ಮೌಖಿಕ ಹಾಗೂ ಲಿಖಿತ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಅಭಿಯೋಜನೆಯ ಪ್ರಕಾರ ಆರೋಪಿತನು ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿ ಮಧ್ಯವನ್ನು ಸಂಗ್ರಹ ಮಾಡಿ ಮಾರಾಟ ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ ಚಾಸಾ−1 ರವರು ಸಿಬ್ಬಂದಿಯೊಂದಿಗೆ ದಾಳಿ ಮಾಡಿ ಸದರಿ ಆರೋಪಿತನಿಂದ ಅಕ್ರಮ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಆರೋಪಿತನು ಸಾರ್ವಜನಿಕ ಸ್ಥಳದಲ್ಲಿ ಮಧ್ಯವನ್ನು ಮಾರಾಟ ಮಾಡುತ್ತಿದ್ದಾಗ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುವುದಾಗಿ ಪ್ರಕರಣ ದಾಖಲಾಗಿದ್ದು ಅದಕ್ಕೆ ಸಂಬಂಧಿಸಿದಂತೆ ಅಭಿಯೋಜನೆ ಫ್ರಾಸಾ−1 ರಿಂದ 5 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಪ್ರಕರಣದ ಜಪ್ತಿ ಪಂಚನಾಮೆ ಪಂಚರಾಗಿ ಫ್ರಾಸಾ−3 ರವರು ತಮ್ಮ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇನ್ನೊರ್ವ ಪಂಚಸಾಕ್ಷಿದಾರರಾದ ಚಾಸಾ−2 ರವರನ್ನು ಅಭಿಯೋಜನೆ ವಿಚಾರಣೆಗೆ ಒಳಪಡಿಸಿಕೊಳ್ಳುವಲ್ಲಿ ವಿಫಲವಾಗಿರುತ್ತದೆ. ಇತರೆ ಫ್ರಾಸಾ−1, 2, 4 ಮತ್ತು 5 ರವರು ಪೋಲಿಸ್ ಸಿಬ್ಬಂದಿಯಾಗಿದ್ದು ಸದರಿಯವರು ಅಭಿಯೋಜನೆ ಪರ ಸಾಕ್ಷ್ಯ ನುಡಿದಿದ್ದು ಪಾಟೀ ಸವಾಲಿನಲ್ಲಿ ಫ್ರಾಸಾ−1 ರವರು ಪಂಚನರನ್ನು ಪಿಎಸ್ಐ ರವರು

ಬರಮಾಡಿಕೊಂಡಿರುತ್ತಾರೆ ಎಂದು ನುಡಿದಿದ್ದು ಪ್ರಾಸಾ-2 ರವರು ಪಂಚರನ್ನು ವಿನೋದ ಎಂಬ ಸಿಬ್ಬಂದಿ ಕರೆದುಕೊಂಡು ಬಂದಿರುತ್ತಾರೆ ಎಂದು ವ್ಯತಿರಿಕ್ತವಾಗಿ ಪಿಎಸ್.ಐ ರವರು ನುಡಿದಿರುತ್ತಾರೆ. ಘಟನಾ ಸ್ಥಳದಲ್ಲಿ ಕಿರಾಣಿ ಅಂಗಡಿ ಇದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಆರೋಪಿಗೆ ಸೇರಿದೆ ಅಂಗಡಿ ಇದೆ ಎಂದರೆ ಸಾಕ್ಷಿ ಸ್ವಲ್ಪ ಅಂತದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆದರೆ ಅಭಿಯೋಜನೆ ಪ್ರಕಾರ ಆರೋಪಿ ತನ್ನ ಅಂಗಡಿಯ ಮುಂದೆ ಅಕ್ರಮವಾಗಿ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಪ್ರಕರಣ ದಾಖಲಾಗಿರುವುದು ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತದೆ. ಅಲ್ಲದೇ ಮಧ್ಯವನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಎಂದು ಪ್ರಕರಣ ದಾಖಲಾಗಿದ್ದು ಆದರೆ ಸದರಿ ಚೀಲವನ್ನು ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಒಟ್ಟಾರೆಯಾಗಿ ಕೂಲಕುಂಷವಾಗಿ ಕಡತವನ್ನು ಪರೀಶಿಲಿಸಿದಾಗ ಆರೋಪಿತನಿಂದ ಘಟನಾ ಸ್ಥಳದಲ್ಲಿ ಅಕ್ರಮ ಮಧ್ಯ ಜಪ್ತಿ ಪಡಿಸಿಕೊಳ್ಳಾಗಿದೆ ಎಂದು ರುಜುವಾತು ಪಡಿಸುವಲ್ಲಿ ಸ್ಪಷ್ಟಸಾಕ್ಷ್ಯಗಳನ್ನು ಅಭಿಯೋಜನೆ ನೀಡುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. **ಅಂಶ.2–** ಅಂಶ 1ಕ್ಕೆ ಸಂಬಂಧಿಸಿದಂತೆ ಮಾಡಿರುವ ಚರ್ಚೆಯ ಹಿನ್ನೆಲೆಯಲ್ಲಿ ಆರೋಪಿತನು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಶಿಕ್ಷಾರ್ಹ ಅಪರಾಧಗಳ ಆರೋಪಣೆಯಿಂದ ಮುಕ್ತರಾಗಲು ಅರ್ಹರಾಗಿದ್ದಾನೆಂದು ಅಭಿಪ್ರಾಯಪಟ್ಟು ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆಃ

## ಃಃ ಆದೇಶ ಃಃ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ಮತ್ತು 34 ರಡಿಯಲ್ಲಿನ ದೋಷಾರೋಪಣೆಯಿಂದ ಮುಕ್ತಗೊಳಿಸಿ ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮತ್ತು ಭದ್ರತಾ ಮುಚ್ಚಳಿಕೆಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

ಮುದ್ದೆಮಾಲು-1 ಖಾಲಿ ಬಾಟಲಿ ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶ ಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶಿಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತ ಲೇಖನ ನೀಡಿ ಬೆರಳಚ್ಚು ಪಡಿಸಿದ ನಂತರ ಅದನ್ನು ಪರಿಶೀಲಿಸಿ ತಿದ್ದುಪಡೆಗಳನ್ನು ಮಾಡಿದ ನಂತರ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 4 ನೇ ಜೂನ್ 2026 ರಂದು ಘೋಷಿಸಲಾಯಿತು).

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.

# ಅನುಬಂಧ

**ಸಾಕ್ಷಾಧಾರಗಳ ಪಟ್ಟಿ**

**ಅಭಿಯೋಜನೆಯ ಪರ ಸಾಕ್ಷಿಗಳು**

| **ಶ್ರೇಣಿ** | **ಹೆಸರುಗಳು** | **ಸಾಕ್ಷ್ಯದ ಸ್ವರೂಪ** |
|---|---|---|
| ಫ್ರಾಸಾ-1 | ಶಂಕರ ತಂದೆ ಬಸವರಾಜ | ಪ್ರತ್ಯಕ್ಷಸಾಕ್ಷಿದಾರರು |
| ಫ್ರಾಸಾ-2 | ಪ್ರಕಾಶ ಸಿ. ತಂದೆ ಗೋವಿಂದಪ್ಪ | ದೂರುದಾರರು |
| ಫ್ರಾಸಾ-3 | ರವಿ @ ರವಿಂದ್ರ ತಂದೆ ಬಸ್ಸಪ್ಪ | ಜಪ್ತಿ ಪಂಚಸಾಕ್ಷಿದಾರರು |
| ಫ್ರಾಸಾ-4 | ದೇವಿಂದ್ರ ತಂದೆ ಹನುಮಂತ್ರಾಯ | ಪ್ರತ್ಯಕ್ಷಸಾಕ್ಷಿದಾರರು |
| ಫ್ರಾಸಾ-5 | ಬಂದಯ್ಯಸ್ವಾಮಿ ತಂದೆ ಬಸ್ಸಯ್ಯ | ತನಿಖಾಧಿಕಾರಿಗಳು |

**ಆರೋಪಿಗಳ ಪರ ಸಾಕ್ಷಿಗಳು**

| ಶ್ರೇಣಿ | ಹೆಸರುಗಳು | ಸಾಕ್ಷ್ಯದ ಸ್ವರೂಪ |
|---|---|---|
| ಇಲ್ಲ | | |

**ದಾಖಲಾತಿಗಳು**

**ಅಭಿಯೋಜನೆಯ ಪರ ದಾಖಲಾತಿಗಳು**

| ಸಂಖ್ಯೆ | ದಾಖಲಾತಿ ಸಂಖ್ಯೆ | ವಿವರಣೆ |
|---|---|---|
| 1. | ನಿಪಿ-1 | ಪಂಚನಾಮೆ |
| 2. | ನಿಪಿ-2 | ಜ್ಞಾಪನ ಪತ್ರ |
| 3. | ನಿಪಿ-3 | ಪ್ರಥಮ ವರ್ತಮಾನ ವರದಿ |
| 4. | ನಿಪಿ-4 | ರಾಸಾಯನಿಕ ಪರೀಕ್ಷಾ ವರದಿ |

**ಆರೋಪಿತರ ಪರ ದಾಖಲಾತಿಗಳು**

| ಸಂಖ್ಯೆ | ದಾಖಲಾತಿ ಸಂಖ್ಯೆ | ವಿವರಣೆ |
|---|---|---|
| ಇಲ್ಲ | | |

**ಮುದ್ದೆಮಾಲುಗಳ ಪಟ್ಟಿ**

| ಸಂಖ್ಯೆ | ಮುದ್ದೆಮಾಲಿನ ಸಂಖ್ಯೆ | ವಿವರಣೆ |
|---|---|---|
| 1. | ಮುದ್ದೆಮಾಲು-1 & 2 | ಖಾಲಿ ಬಾಟಲಿಗಳು |

Digitally signed by SURESH ANNAPPA SAVADI

Location: Senior Civil Judge and JMFC, Devadurga

(ಸುರೇಶ ಅಣ್ಣಪ್ಪ ಸವದಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.